"SATYAVADI" Founded 1917 Regd. No. M. 1299.

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 2] ಬುಧ ವಾರ 12—9—41 [ಬಿಡಿ ಪ್ರತಿ 3 ಪೈ

ಅಣು ಬಾಂಬಿನ ರಹಸ್ಯ

ಅಣು ಬಾಂಬಿನ ರಹಸ್ಯದ ವಿಷಯದಲ್ಲಿ ರಷ್ಯಾ, ಫ್ರಾನ್ಸ್ ಮತ್ತು ಜೈನಾ ಇವುಗಳು ಭಾಗವಹಿಸಲೇಕೆಂದು ವಿದೇಶಾಂಗ ಮಂತ್ರಿ ಸಮ್ಮೇಳನದಲ್ಲಿ ಸೂಚಿಸಲ್ಪಟ್ಟಿರುವುದಾಗಿ ವರದಿಯಾಗಿದೆ

ರಾಜಧಾನಿ

ಸ್ವ. ಸು] ಮೈಸೂರು, ಸೆ 12

ಕಳ್ಳತನ

ರಾಜಧಾನಿಯ ಸುಪ್ರಸಿದ್ಧ ಅಡ್ವೊಕೇಟರಾದ ಶ್ರೀ ಬಿ. ಎ. ಕೃಷ್ಣಸ್ವಾಮಯ್ಯಂಗಾರ್‌ರವರ ಆಫೀಸಿನಲ್ಲಿದ್ದ ಕೆಲವು ಪದಾರ್ಥಗಳು ಕಳ್ಳತನವಾಗಿರುವುದಾಗಿ ವರದಿಯಾಗಿದೆ. ಈ ವಿಷಯದಲ್ಲಿ ಪೋಲೀಸರಿಗೆ ದೂರು ಹೋಗಿ ತನಿಖೆ ಕ್ರಮ ನಡೆಸುತ್ತಿರುವುದಾಗಿ ತಿಳಿಯಬಂದಿದೆ.

ಬೆನಿಫಿಟ್ ಪ್ರದರ್ಶನಗಳು

ಮೈಸೂರಿನಲ್ಲಿ ಬಿಡಾರ ಮಾಡಿರುವ ಶ್ರೀ ಚಾವಂಡೇಶ್ವರಿ ನಾಟಕ ಸಭಾದವರು ಸ್ಥಳೀಯ ಅನೇಕ ಸಂಸ್ಥೆಗಳಿಗಾಗಿ ಬೆನಿಫಿಟ್ ಪ್ರದರ್ಶನಗಳನ್ನು ಏರ್ಪಡಿಸುವುದಾಗಿ ತಿಳಿಯಬಂದಿದೆ. ಹೊಯ್ಸಳ ಕರ್ನಾಟಕ ಸಭೆಯು ಸಹಾಯಾರ್ಥವಾಗಿ ಸಧ್ಯದಲ್ಲಿಯೇ ನಾಟಕವನ್ನು ಅಭಿನಯಿಸುವುದಾಗಿ ತಿಳಿಯಬಂದಿದೆ.

ಪಮ್ಮಿ ಪೂರ್ಣಶಾಂತಿ

ಕಲೋಪಾಸಕರ ಆರಾಧನೆಗಾಗಿ ಜನಿಸಿರುವ ಸ್ಥಳೀಯ ಕಲಾಸಂಘವು ಅಭಿನಯ ವಿಶಾರದ ಶ್ರೀ ಜೆ.ವಿ. ನಾಗೇಶರಾಯರ ೭೦ ನೇ ವರ್ಷದ ಷಷ್ಟಿ ಪೂರ್ತಿ ಶಾಂತಿಯನ್ನು ನಿಜೃಂಭಣೆಯಿಂದ ಆಚರಿಸಲು ಇಚ್ಛಿಸಿದೆ

ಹರಿಜನರ ದೇವಾಲಯ ಪ್ರವೇಶ

ಹರಿಜನರಿಗೆ ದೇವಾಲಯ ಪ್ರವೇಶವನ್ನು ಗಳಿಸಿಕೊಡುವ ಸಲುವಾಗಿ ರಾಜಧಾನಿಯಲ್ಲಿ ಸನ್ನಿತಿಯೇರ್ಪಾಡಾಗುವುದಾಗಿ ತಿಳಿಯಬಂದಿದೆ

ಸಕ್ಕರೆ ಅಭಾವದ ಬಗ್ಗೆ ಸಭೆ

ರಾಜಧಾನಿಯಲ್ಲಿ ಉಂಟಾಗಿರತಕ್ಕ ಸಕ್ಕರೆ ಅಭಾವವನ್ನು ನಿವರ್ತಿಸಲು ಸಭೆಯೊಂದನ್ನು ಜರೂರಾಗಿ ಛೀಫ್ ಕಮೀಶನರ್ ಆಫೀಸರರು ಕರೆಯುವುದಾಗಿ ಹೇಳಲಾಗಿದೆ.

ಜನರಲ್ ಟೋಜೋರ

ದಿಸ್ತಗಿರಿಯೆ? ಆತ್ಮಹತ್ಯೆ?

ಜಪಾನಿನ ಮಾಜಿ ಮುಖ್ಯ ಮಂತ್ರಿ ಜನರಲ್ ಟೋಜೋರವರು ದಸ್ತಗಿರಿ ಮಾಡಲ್ಪಡಬೇಕೆಂದು ಜ || ವೆಕ್‌ಅರ್ಥರರು ಆಜ್ಞೆ ಕೊಟ್ಟಿರುವರೆಂದು ಟೋಕಿಯೋದ ತಾ || 10 ರ ವಾರ್ತೆ.

ಈ ಆಜ್ಞೆ ಹೊರಟ ಕೆಲ ಗಂಟೆಗಳಲ್ಲಿಯೇ ಟೋಜೋರವರು ತಮ್ಮ ಮನೆಯಲ್ಲಿ ಪ್ರಾಣತ್ಯಾಗಮಾಡಲು ಗುಂಡು ಹಾರಿಸಿಕೊಂಡರೆಂದು ಹೇಳಲಾಗಿದೆ, ಅವರು ಸತ್ತರೋ ಬದುಕಿರುವರೋ?

ನೋಟಿನ ಜೆಲೆ ಇಳಿದಿದೆ

ಶಾಂಘಾಯಿನಲ್ಲಿ ಕರೆನ್ಸಿಯ ಕುರಿತಾದ ಗೊಂದಲ ಮುಗಿಲು ಮುಟ್ಟಿದೆ. ಪ್ರಸ್ತುತ ಅಲ್ಲಿ ಒಂದು ಬಟ್ಟಲು ತುಂಬಾ ಅಕ್ಕಿ ಕೊಂಡುಕೊಳ್ಳಲು ಬೇಕಾದರೆ ಐದು ಸಾವಿರ ಡೊಲರ್‌ಗಳ ಪಸೈಟ್ ನೋಟುಗಳನ್ನು ನೋಡಬೇಕು.

ಪ್ಯಾರಿಲಾಲ್‌ರ ಪ್ರಣಯ ಪ್ರಸಂಗ

ಪ್ಯಾರಿಲಾಲ್ ೪೫ ವರ್ಷದ ಅವಿವಾಹಿತ. ಡಾ | ಸುಶೀಲನಾಯರರ ಸಹೋದರ. ಗಾಂಧೀಜೀಯವರ ಕಾರ್ಯದಕ್ಷರಿ. ಆಶ್ರಮದ ಹದಿನಾರು ವರ್ಷ ವಯಸ್ಸಿನ ಕುಮಾರಿ ಮನುಬೆರೊಡನೆ ಪ್ರಣಯವಿದೆಯೆಂದು ಕಲ್ಕತ್ತಾದ ಪತ್ರಿಕೆಯೊಂದರ ಪ್ರಕಟಣೆಯನ್ನು ನೋಡಿ ಪ್ಯಾರಿಲಾಲರ ವರ್ತನೆಯನ್ನು ವಿರೋಧಿಸಿದರು. ಈಗ ಪ್ಯಾರಿಲಾಲರು ಕೆಲಸದಿಂದ ನಿವೃತ್ತರು; ದೆಹಲಿಯಲ್ಲಿ ತಮ್ಮ ಸ್ನೇಹಿತರೊಡನೆ ವಾಸಿಸುವರು.

ಪೆಸಿಫಿಕ್ ಸಮರ ಸಾಧನಗಳಲ್ಲೊಂದು

ಬಜೂಕ ರಾಕೆಟ್

ಬಜೂಕ ರಾಕೆಟ್ ಉಕ್ಕಿನ ತಗಡುಗಳನ್ನು ಸೀಳಿ ಮುನ್ನುಗ್ಗಬಲ್ಲ ಭಯಂಕರ ಸಿಡಿವಸ್ತು. ಟ್ಯಾಂಕ್‌ಗಳನ್ನು ನಾಶಪಡಿಸಬಲ್ಲದು. ಉಕ್ಕಿನ ಟ್ಯಾಂಕುಗಳನ್ನು ಸೀಳಬಲ್ಲ ಅದರ ಶಕ್ತಿ ಎಷ್ಟಿರಬಹುದೆಂದು ನೀವೇ ಊಹಿಸಿ.

ದುರ್ಗಾಮೋಟು ಬೆದರಿಸುತ್ತಾಳೆ

ಲಾಹೋರಿನ ಸುಪ್ರಸಿದ್ಧ ನಟಿ ದುರ್ಗಾಮೋಟು ಪಾಂಜೋಲಿ ಆರ್ಟ್ಸ್ ಸೇರುವುದಕ್ಕೆ ಮುಂಚೆ ಫೊಟೋ ಪ್ಲೇಸ್ ಒಂದರಲ್ಲಿ ತಿಂಗಳಿಗೆ ಹೂ ೩೫ ಪಡೆಯುತ್ತಿದ್ದನು. ಆಗ ಆಕೆಯ ತೂಕ ಕೇವಲ ೧೪೦ ರಾತ್ತುಯಿದ್ದು, ಸಿನಿಮಾ ನೇರಿದ್ದೇ ತಡ, ೩೨ ನೇ ವಯಸ್ಸಿಗಾಗಲೇ ೬೫೦ ರಾತ್ತ್ಲಗಳಷ್ಟು ಬೆಳೆದಿದ್ದಾಳೆ. ಮಾತೆತ್ತಿದರೆ ಹಾಲೀವುಡ್ಡಿಗೆ ಹೋದೇನೆಂದು ಬೆದರಿಸುತ್ತಿದ್ದಾಳೆ

ನಿಖಿಲ ಕರ್ನಾಟಕ ಆಯುರ್ವೇದ ಮಹಾಸಮ್ಮೇಳನ

ಡಿಸಂಬರ್ ಅಂತ್ಯದಲ್ಲಿ ನಿಖಿಲ ಕರ್ನಾಟಕ ಆಯುರ್ವೇದ ಮಹಾ ಸಮ್ಮೇಳನದ ಶಾಖಾ ಸಮ್ಮೇಳನಗಳಲ್ಲಿ ಈ ರೀತಿ ಅಧ್ಯಕ್ಷರನ್ನು ಚುನಾಯಿಸಲಾಗಿದೆ —

1 ಶಸ್ತ್ರಸಂಭಾಷಾ ಪರಿಷತ್— ಆಯುರ್ವೇದ ವಿದ್ವಾನ್ ಡಾ || ಎನ್. ಎಸ್. ಸುಬ್ರಹ್ಮಣ್ಯಶಾಸ್ತ್ರಿ ಎಲ್. ಎಂ.ಪಿ., ಮೈಸೂರು.

2 ಶಾಸ್ತ್ರೀಯ ಸಂಭಾಷಾ ಪರಿಷತ್— ಡಾ || ಪಂಗಳನೇಡೆ, ವಿಜಾಪುರ.

3 ದರ್ಶನ ಸಂಭಾಷಾ ಪರಿಷತ್ — ಬಿ ವಿ. ನಂಜುಂಡಸ್ವಾಮಿಪಂಡಿತರು ಬಿ. ಎಸ್ ಸಿ, ನಂಜನಗೂಡು.

4 ಬಾಲಚಿಕಿತ್ಸಾ ಸಂಭಾಷಾ ಪರಿಷತ್ ಆಯುರ್ವೇದಾಚಾರ್ಯ ಪಿ. ಕೆ ಟಿ ನಂಬಿಷ್ಕ, ಮೈಸೂರು.

5 ಚಾರಿತ್ರಿಕ ಸಂಭಾಷಾ ಪರಿಷತ್ — ವೈದ್ಯಗುರು ಹಲ್ಸೀಕರ್, ಹುಬ್ಬಳ್ಳಿ,

6 ವನಸ್ಪತಿ ಸಂಭಾಷಾ ಪರಿಷತ್ — ಶ್ರೀ ಕೃಷ್ಣಯ್ಯಂಗಾರ್, ಬೆಂಗಳೂರು

ಸ್ತ್ರೀ ಚಿಕಿತ್ಸಾ ಸಂಭಾಷಾ ಪರಿಷತ್, ಸ್ಪ್ಲೀಪದ ಚಿಕಿತ್ಸಾ ಸಂಭಾಷಾ ಪರಿಷತ್ ದ್ರವ್ಯ ಸಂಭಾಷಾ ಪರಿಷತ್‌ಗಳಿಗೆ ಅಧ್ಯಕ್ಷರ ಚುನಾವಣೆಯಾಗಬೇಕಾಗಿದೆ. ಎಂದು ಒದಾಗಿ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಲಾಹೋರ್‌ನಲ್ಲಿ ಅಗ್ನಿ ಅಷಾಢುತ

ಲಾಹೋರ್, ಸೆ 10

ಬೀಡಿ ಕಸ್ಮೆರು ಮೋತಿವ ಹಲ್ ಥಿಯೇಟರಿನ ಶಾಖೆಗೆ ಅಗ್ನಿ ಬಿದ್ದು ಪರಿಣಾಮವಾಗಿ ಸಂಪೂರ್ಣವಾಗಿ ಮಾಳು ಅಂತಸ್ತಿನ ಕಟ್ಟಡವೇ ನಾಶವಾಗಿ ಕಲವು ಮಂದಿ ಗಾಯಗೊಂಡರು.

ಮಲಕ್ಕಾ ಜಲಸಂಧಿಯಲ್ಲಿ ಸ್ಟೈಕ್ ಸ್ಟೀಪರುಗಳು ಸಿದ್ಧವಾಗಿವೆ

ದೂರದೃಷ್ಟ್ಯ ಕೇಂದ್ರ

ಸಿಂಗಪುರಕ್ಕೆ ಹೋಗುವ ದಾರಿಯನ್ನು ನಿಷ್ಕಂಟಕವಾಗಿ ಮಾಡಲು ಮಿತ್ರರ ಸ್ಟೈಕ್ ಸ್ಟೀಪರುಗಳು ಸಿದ್ಧವಾಗಿ ನಿಂತಿವೆ ಇವಕ್ಕೆ ಬೇಕಾದ ಎಣ್ಣೆ ಮತ್ತು ಇತರ ಸಕಲ ಸಲಕರಣೆಗಳನ್ನೂ ಸಾವಿರ ಮೈಲಿ ದೂರದಿಂದ ಒದಗಿಸಲಾಗಿದೆ. ಅಪಾಯಕರವಾದ ಕಲಸ ಕೈಗೊಳ್ಳ ಬೇಕಾಗಿದ್ದರೂ ನಾವಿಕರು ಮಿತ್ರರ ನೌಕಾಸ್ಥಾನಕ್ಕೆ ಮೊದಲು ಹೋಗಿ ತಲಪುವ ಗೌರವಕ್ಕೆ ಪಾತ್ರರಾಗಬೇಕೆಂದು ಬಹಳ ಆತುರ ಪಡುತ್ತಿದ್ದಾರೆ.

ಬರ್ಮಾಯರ ಪುನರುದ್ಧಾರ ಕಾರ್ಯ

ರಂಗೂನ್

ಮಿತ್ರ ಸಡೆಯ ಸಹಾಯ ಮತ್ತು ಸಲಹೆಗಳ ಪ್ರಕಾರ ಬರ್ಮಾಯರು ತಮ್ಮ ಊರು ಕೇರಿಗಳನ್ನು ಪುನರ್ರಚಿಸಲು ತೊಡಗಿದ್ದಾರೆ. ಪೆಗು ಪ್ರಾಂತದಲ್ಲಿ ಈಗ ಏನತ್ತು ಸಾವಿರ ಬರಿಗೈಯ ಬಡ ರೈತರಿದ್ದಾರೆ ಈಚಿನ ಕೆಲವು ವಾರ್ತೆಗಳಲ್ಲಿ ಸುಮಾರು ಹನ್ನೆರಡು ಸಾವಿರ ಜನಕ್ಕೆ ಜೀರ್ಣೋದ್ಧಾರ ಕಾರ್ಯದಲ್ಲಿ ಕೂಲಿ ಕೆಲಸ ಸಿಕ್ಕಿದೆ. ನೂರಾರು ಮಂದಿಗೆ ಕಛೇರಿಗಳಲ್ಲಿಯೂ, ಸೈನ್ಯ ಶಾಖೆಯಲ್ಲಿಯೂ ಕೆಲಸ ಸಿಕ್ಕಿದೆ. ಮನೆಯಿಲ್ಲದವರಿಗೆ ಸಧ್ಯಕ್ಕೆ ಸ್ಥಳವಸತಿ ಕಲ್ಪಿಸಲಾಗಿದೆ. ಇಲ್ಲಿ ಅವರ ಆರೋಗ್ಯ ರಕ್ಷಣೆಗೆ ಗಮನ ಕೊಡುತ್ತಿದೆ. ಸಾವಿರದೈನೂರು ಜನಕ್ಕೆ ಕಾಲರಾ ಇನಾಕ್ಯುಲೇಷನ್ ಹಾಕಿಸಲಾಗಿದೆ. ಆದರೆ ಅವರಿಗೆ ಬಟ್ಟೆ ಅಭಾವ ವಿಪರೀತವಾಗಿದೆ. ಕೊಳ್ಳುವ ಶಕ್ತಿಯುಳ್ಳವರಿಗೆ ತಲಾ ಒಂದೊಂದು ಚೀಟಿ ಹಂಚಲಾಗಿದೆ. ಅದನ್ನು ತೋರಿಸಿ ಅವರು ಬಟ್ಟೆ ಕೊಳ್ಳಬಹುದು. ಗತಿಯಿಲ್ಲದ ಬಡವರಿಗೆ ಉಚಿತವಾಗಿ ಬಟ್ಟೆ ಕೊಡಲಾಗುತ್ತಿದೆ ಕೆಲವು ವೇಳೆ ದುಡ್ಡಿಗಿಂತ ಬಟ್ಟೆಯೇ ಹೆಚ್ಚು ಅಮೂಲ್ಯವಾಗಿದೆ. ಆದ್ದರಿಂದ ರೈತರನ್ನು ಭತ್ತ ಬೆಳೆಯುವಂತೆ ಉತ್ತೇಜಿಸಿ ಅವರಿಗೆ ಬಟ್ಟೆ ಹಂಚಲಾಗುತ್ತಿದೆ. ಬರ್ಮಾ ಜಪಾನಿಗಳ ಕೈಲಿದ್ದಾಗ ಕೆಲಸಕ್ಕೆ ಬಾರದ ಒಂದು ಉಡುಪಿಗೆ ಒಂದು ಸಾವಿರ ರೂಪಾಯಿ ಬೆಲೆಯಂತೆ.

ನಿರ್ಧಾರವು ಭೇಟಿ

ಬೆಂಗಳೂರು, ಸೆ 11

ಅತಿರುದ್ರ ಮಹಾಯಾಗ ನಡೆದ ಪ, ದೇಶಕ್ಕೆ ಜಯವುಂಟಾದ ದಿವಾ ಮಿಚ್ಚಾ ಇಸ್ಮೈಲ್ ಭೇಟಿನಿತ್ತರು.

ಟಿ. ನರಸೀಪುರದಲ್ಲಿ ಕೂಲಿತನ ಹಾವಳಿ ಹೆಚ್ಚಾಗಿರುವುದೆಂದು ತಿಳಿದು ಬಂದಿದೆ.

ಲಾಹೋರಿನಲ್ಲಿ ಸಿ. ಐ. ಜಿ.

AT Opera— From 14-12-45

FIGHT TO FINISH

— featuring —

Jack Mull Hall — Lola Lane — Frankie Doro

At Ranjit ❁ Sant Tulsi Das

ವಿಷ್ಣುಪಂತ್ ಪಗ್ನೀಸ್, ಲೀಲಾ ಚಿಟ್ನೀಸ್, ವಾಸಂತಿ ಪಾಶ್ರವಹಿಸಿರುವ

ಸಂತ್ ತುಳಸೀದಾಸ್

ರಕ್ತವರ್ಧಿಗೆ – ಧಾತುಪುಷ್ಟಿಗೆ ಸಂಜೀವನ

ಅಶ್ವಗಂಧಾ

ಬೆಲೆ ಡಬ್ಬಿಗೆ ಒಂದು ರೂಪಾಯಿ.

ವಿಳಾಸ— ಶಕ್ತಿ ಸುಧಾ, ೧೦೬೭ ಚಾಮರಾಜಪುರಂ, ಮೈಸೂರು

For Good Printing

L. N. Press

Sriramp:t MYSORE

ಅ ರ ಸಾಮಾಜಿಕ ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇ ಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

No. R 1- 60/45-46

ಮೈಸೂರು ಸಿಟಿ ರೇಷನಿಂಗ್

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಗೋದೌನ್ ಲೈಸೆನ್ಸ್ ಪಡೆದ ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳು ಸಹ 1945 ನೇ ಡಿಸೆಂಬರು ಮಾಹೆ 16 ನೇ ತಾರೀಖು ಭಾನುವಾರ ಮಧ್ಯಾಹ್ನ ಮೊಹರಂ ಹಬ್ಬದ ಪ್ರಯುಕ್ತ ಮುಚ್ಚಲ್ಪಡುತ್ತವೆ.

(ಸಹಿ) ಟಿ. ವಿ. ರೆಡ್ಡಿ
1-12-45 ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ಹಸಕ್ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟ & ಸಕ್
ಶಿವರಾಂಪೇಟೆ ಮೈಸೂರು.

ಮೈಸೂರು ಸಿಟಿ ಮುನಿಸಿಪಾಲಿಟಿ

ಮೈಸೂರು ತಾ || 8-12-45

ಹರಾಜು ನೋಟೀಸು

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಕೃಷ್ಣರಾಜ ವನಂಲ್ಲಿ ಮೈಸೂರು ಸಿಟಿ ಮುನಿಸಿಪಾಲಿಟಿಯವರು ಕಟ್ಟಿಸಿರುವ 'ಮಾಡಲ್ ಹೌಸೆಸ್' 8 ಮನೆಗಳನ್ನು ಪಬ್ಲಿಕ್ಕಾಗಿ ತಾ || 23-12-45 ನೇ ಭಾನುವಾರ ದಿವಿ 10 ಘಂಟೆಗೆ ಸದರಿ ಮನೆಗಳ ಬಳಿ ಹರಾಜು ಮಾಡಲ್ಪಡುತ್ತದೆ. ಇಷ್ಟವುಳ್ಳವರು ಖುದ್ದು ಹಾಜರಾಗಿ ಹರಾಜಿನಲ್ಲಿ ಸವಾಲ್ ಮಾಡಿ, ಸದರಿ ಮನೆಗಳನ್ನು ಪಡೆಯಬಹುದು. ಹೆಚ್ಚಿನ ವಿಚಾರಗಳನ್ನು ಮುನಿಸಿಪಲ್ ಆಫೀಸಿಗೆ ಬಂದು ತಿಳಿಯಬಹುದು.

(ಸಹಿ) ಆರ್. ಎಲ್. ರಾಜು
ಮುನಿಸಿಪಲ್ ಎಂಜಿನಿಯರ್